(ಸದನವನ್ನು ಮಧ್ಯಹ್ನ 1.41 ಗಂಟೆಗೆ ಭೋಜನಕ್ಕೆ ಮುಂದೂಡಿ ಪುನಃ 2.30 ಗಂಟೆಗೆ ಸೇರಲು ನಿರ್ಣಯಿಸಲಾಯಿತು)

ಸದನವು ಭೋಜನ ವಿರಾಮದ ನಂತರ ಅಪರಾಹ್ನ 02 ಗಂಟೆ 46 ನಿಮಿಷಕ್ಕೆ ಸಮಾವೇಶಗೊಂಡಿತು.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

(ಈ ಹಂತದಲ್ಲಿ ಶ್ರೀ ಬಿ.ಎಸ್.ಯಡಿಯೂರಪ್ಪನವರು ಸದನದ ಬಾವಿಯೊಳಗೆ ಬಂದು ನೆಲ ಹಾಸಿನ ಮೇಲೆ ಧರಣಿ ಕುಳಿತುಕೊಂಡರು, ನಂತರ ಶ್ರೀ ಬಿ.ಶ್ರೀರಾಮುಲುರವರು ಅವರ ಜೊತೆಯಲ್ಲಿ ಕುಳಿತರು.)

6. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು: ಈಗ ಪ್ರಶ್ನೋತ್ತರ ಶ್ರೀ ಕೆ ಗೋಪಾಲಯ್ಯನವರ ಪ್ರಶ್ನೆ

ಶ್ರೀ ಕೆ.ಗೋಪಾಲಯ್ಯ (ಮಹಾಲಕ್ಷ್ಮಿ ಲೇಔಟ್): ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಸಂಖ್ಯೆ 121 ನ್ನು ಮಾನ್ಯ ಕಾರ್ಮಿಕ ರಾಜ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಪಿ.ಬಿ ಪರಮೇಶ್ವರ ನಾಯ್ಕ (ಕಾರ್ಮಿಕ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಲಾಗಿದೆ.

ಶ್ರೀ. ಕೆ. ಗೋಪಾಲಯ್ಯ (ಮಹಾಲಕ್ಷ್ಮೀ ಲೇ ಔಟ್) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಬೆಂಗಳೂರು ನಗರದಲ್ಲಿರುವ ಹೋಟೆಲ್ ಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು,

ಆ) ಎಷ್ಟು ಹೋಟೆಲ್ ಕಾರ್ಮಿಕರಿಗೆ ಕಾರ್ಮಿಕ ಕಾನೂನಿನ್ವಯಪ್ರಾವಿಡೆಂಟ್ ಫಂಡ್, ಇ.ಎಸ್.ಐ ಹಾಗೂ ಇತರ ಸೌಲಭ್ಯ ಗಳನ್ನು ನೀಡಲಾಗುತ್ತಿದೆ;

ಇ) ಈ ಕಾರ್ಮಿಕರಿಗೆ ಈಗ ನೀಡುತ್ತಿರುವ ಕನಿಷ್ಟ ಮಾಸಿಕ ವೇತನದ ಪ್ರಮಾಣವೆಷ್ಟು,

ಈ) ಈ ಕನಿಷ್ಠ ಮಾಸಿಕ ವೇತನವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಪಿ.ಟಿ ಪರಮೇಶ್ವರ ನಾಯ್ಕ : (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಬೆಂಗಳೂರು ನಗರದಲ್ಲಿರುವ ಹೋಟೆಲ್‌ಗಳಲ್ಲಿ 1,86,725 ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ.

ಆ) ಕೇಂದ್ರ ಸರ್ಕಾರ ಪ್ರಾವಿಡೆಂಟ್ ಫಂಡ್ ಮತ್ತು ಇ.ಎಸ್.ಐ ಕಾಯ್ದೆ ಗಳನ್ನು ಜಾರಿಗೆ ತರುತ್ತದೆ. 20 ಮತ್ತು 20ಕ್ಕಿಂತ ಹೆಚ್ಚು ಕಾರ್ಮಿಕರಿಂದ ಸಂಸ್ಥೆಗೆ ಪಿಎಫ್ ಕಾಯ್ದೆ ಮತ್ತು 10 ಮತ್ತು 10ಕ್ಕಿಂತ ಹೆಚ್ಚು ಕಾರ್ಮಿಕ ರಿರುವ ಸಂಸ್ಥೆಗೆ ಇಎಸ್ಐ ಕಾಯ್ದೆಗಳು ಅನ್ವಯವಾಗುತ್ತವೆ ಬೆಂಗಳೂರು ನಗರದಲ್ಲಿರುವ ಹೋಟೆಲ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 98689 ಕಾರ್ಮಿಕರಿಗೆ ಪ್ರಾವಿಡೆಂಟ್ ಫಂಡ್ ಸೌಲಭ್ಯವನ್ನು ನೀಡಲಾಗುತ್ತಿದೆ ಮತ್ತು 42,500 ಕಾರ್ಮಿಕರಿಗೆ ಇ.ಎಸ್ ಐ ಸೌಲಭ್ಯವನ್ನು ಒದಗಿಸ ಲಾಗುತ್ತಿದೆ.

ಇ) ಹೋಟೆಲ್ ಉದ್ದಿಮೆಯ ಕನಿಷ್ಟ ವೇತನ ಕಾಯ್ದೆ, 1948ರಡಿ–ಯಲ್ಲಿ ಅನು ಸೂಚಿತ ಉದ್ದಿಮೆಯಾಗಲಿದ್ದು, ಪ್ರಥಮ ಬಾರಿಗೆ 1960ನೇ ಸಾಲಿನಲ್ಲಿ ವೇತನವನ್ನು ನಿಗಧಿ ಮಾಡಲಾಗಿತ್ತು. ನಂತರ 1967, 1973, 1978, 1986,1994 ಮತ್ತು 2003 ಪರಿಷ್ಕರಿಸಲಾಗಿತ್ತು. ನಂತರ ದಿ:06–01–11 ರಂದು ವೇತನವನ್ನು ಪರಿಷ್ಕರಿಸಲಾಗಿರುತ್ತದೆ. 2013–14ನೇ ಸಾಲಿನಲ್ಲಿ ಪಡೆಯುತ್ತಿರುವ ವೇತನದ ವಿವರಗಳನ್ನು ಅನುಬಂಧ ದಲ್ಲಿ ಒದಗಿಸಲಾಗಿದೆ.

ಈ) ಕನಿಷ್ಠ ವೇತನದಲ್ಲಿ ನಿಗಧಿಪಡಿಸುವ ಸಂಬಂಧ ವಿ.ಶಾಂತಪ್ಪ ಸಮಿತಿ ಮಾಡಿರುವ ಶಿಫಾರಸ್ಸುಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ರಾಜ್ಯದ 16 ಕೇಂದ್ರಗಳಿಂದ ಜೀವನಾಂಶಕ ವಸ್ತುಗಳ ಬೆಲೆಗಳ–ನ್ನು ಸಂಗ್ರಹಿಸಿ ವೇತನ ದರ ನಿಗಧಿ ಮತ್ತು ವೇತನ ದರ ನಿಗಧಿ ಮತ್ತು ವೇತನ ಪರಿಷ್ಕರಣೆ ಮಾಡಲಾಗುತ್ತದೆ ಪ್ರತಿ ವರ್ಷ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ತುಟ್ಟಿಭತ್ಯೆಯನ್ನು ಪಾವತಿ ಮಾಡಬೇಕಾಗುತ್ತದೆ.ತುಟ್ಟಿ ಭತ್ಯೆಯ ದರ ಗ್ರಾಹಕ ಬೆಲೆ ಸೂಚ್ಯಂಕದ ಏರಿಕೆಗಳಿಗೆ ಅನುಗುಣವಾಗಿ ರುತ್ತದೆ.

Answer

ಅ) 1,86,725 number of workers are working in Hotels of Bangalore Urban District

ಆ) Provident Fund and ESI Acts are being implemented by Government of India Provident Fund Act is applicable to the establish -ments employing 20 and above workers and ESI Act is applicable to the establishments employing 10 and above workers Provident Fund being given to 98,689 Labourers working in Hotels in Bangalore and E S.I benefit are being given to 42,500 Labours

ಇ) Hotel Industry is one of the Scheduled Employment under the Minimum Wages Act, 1948 Initially minimum wages were fixed during the year 1960 Later wages were revised during the years 1967,1973,1978,1986,1994 and 2003 On 06-01-2011 wages were revised Rates of minimum wages applicable to Hotel Industry for the year 2013-14 is shown at Annexure -1 Minimumwages includes Basic and Dearness Allowance

ಈ) Wages are fixed and revised based on the recommendations of Sri V Shantappa Committee From 16 industrial centres rates of

essential commodities are being collected and wage rates are arrived at Dearness Allowance has to be paid every year w e f 1st of April Dearness Allowance depends upon increase in Consumer Price Index (CPI)

2013–2014ನೇ ಸಾಲಿಗೆ "ಹೋಟೆಲ್" ಉದ್ದಿಮೆಗೆ ಪಾವತಿಸುತ್ತಿರುವ ವೇತನ ದರಗಳು

ಕ್ರಮ ಸಂಖ್ಯೆ	ಕೆಲಸದ ವರ್ಗಗಳು	ಕನಿಷ್ಠ ವೇತನ ಪ್ರತಿ ತಿಂಗಳಿಗೆ			
			ವೇತನ–1	ವೇತನ–2	ವೇತನ–3
1	2	3	4	5	6
1	ಅಡಿಗೆಯವರು/ಸಿಹಿ ತಿಂಡಿ ಮಾಡುವವರು	ಮೂಲ ವೇತನ ತುಟ್ಟಿ ಭತ್ಯೆ ಒಟ್ಟು	4160–00 1357–20 5517–20	4127 1357–20 5484–20	4101–00 1357–20 5458–20
2	ಮೇಲ್ವಿಚಾರಕರರು/ ಅಡಿಗಮನೆ ಮೇಲ್ವಿಚಾರಕರು	ಮೂಲ ವೇತನ ತುಟ್ಟಿ ಭತ್ಯೆ ಒಟ್ಟು	4127–00 1357–20 5484–20	4101–00 1357–20 5458–20	4087–00 1357–20 5444–20
3	ಬಾರೇಮನ್	ಮೂಲ ವೇತನ ತುಟ್ಟಿ ಭತ್ಯೆ ಒಟ್ಟು	4102–00 1357–20 5459–20	4088–00 1357–20 5445–20	4076–00 1357–20 5433–20

4.	ಸಹಾಯಕ ಅಡಿಗೆಯವ/ ದೋಸೆ ಮಾಡುವವ/ ಇಡ್ಲಿ ಮಾಡುವವ/ ಚಪಾತಿ ಮಾಡುವವ	ಮೂಲ ವೇತನ ತುಟ್ಟಿ ಭತ್ಯೆ ಒಟ್ಟು	4088–00 1357–20 5445–20	4076–00 1357–20 5433–20	4056–00 1357–20 5413–20
5	ಕೊಠಡಿ ಹುಡುಗ/ ಸಹಾಯಕ (ರೂಂ ಬಾಯ್)				
6.	ಕಾಫಿ/ಟೀ ಮಾಡುವವ/ ವಿತರಣೆ ಸರಬರಾಜು ಮಾಡುವವ/ ಬೇರರ್/ ವೇಟರ್/ ಬಟ್ಲರ್/ ಅರೆಯುವವ ಅಥವಾ ರುಬ್ಬುವವ	ಮೂಲ ವೇತನ ತುಟ್ಟಿ ಭತ್ಯೆ ಒಟ್ಟು	4056–00 1357–20 5413–20	3874–00 1357–20 5231–20	3847–00 1357–20 5204–20
7.	ತರಕಾರಿ ಹಚ್ಚುವವ/ ಮಾಂಸದ ಚೂರು ಮಾಡುವವ/ ಪಾರ್ಸೆಲ್ ಹುಡುಗ	ಮೂಲ ವೇತನ ತುಟ್ಟಿ ಭತ್ಯೆ ಒಟ್ಟು	3874–00 1357–20 5231–20	3837–00 1357–20 5194–20	3757–00 1357–20 5114–20
8.	ನೀರು ಕೊಂಡು ಯ್ಯುವವ/ ತೋಟದ ಮಾಲಿ/ಧೋಬಿ ಅಥವಾ ಅಗಸ				

9	ಸ್ವಾಗತಕಾರರು	ಮೂಲ ವೇತನ	4160–00	4127–00	4101–00
		ತುಟ್ಟಿ ಭತ್ಯೆ	1357–20	1357–20	1357–20
		ಒಟ್ಟು	517–20	5194–20	5458–20
10	ದೂರವಾಣಿ ನಿರ್ವಾಹಕ				
11	ಎಲೆಕ್ಟ್ರೀಷಿಯನ್	ಮೂಲ ವೇತನ	4127–00	4101–00	4087–00
		ತುಟ್ಟಿ ಭತ್ಯೆ	1357–20	1357–20	1357–20
		ಒಟ್ಟು	5484–20	5458–20	5444–20
12	ಲಿಫ್ಟ್ ಅಟೆಂಡರ್	ಮೂಲ ವೇತನ	3874–00	3837–00	3757–00
		ತುಟ್ಟಿ ಭತ್ಯೆ	1357–20	1357–20	1357–20
		ಒಟ್ಟು	5231–20	5194–20	5114–20
13.	ಲೆಕ್ಕಗಾರ (ಅಕೌಂಟೆಂಡ್)	ಮೂಲ ವೇತನ	4160–00	4127–00	4101–00
		ತುಟ್ಟಿ ಭತ್ಯೆ	1357–20	1357–20	1357–20
		ಒಟ್ಟು	5517–00	5484–20	5458–20
14.	ಗುಮಾಸ್ತ/ ಬೆರಳಚ್ಚುಗಾರ/ನಗದು ಗುಮಾಸ್ತ/ ಸ್ಟೋರ್ ಕೀಪರ್	ಮೂಲ ವೇತನ	4088–00	4076–00	4056–00
		ತುಟ್ಟಿ ಭತ್ಯೆ	1357–20	1357–20	1357–20

		ಒಟ್ಟು	5445–20	5433–20	5413–20
15.	ಶುಚಿ ಮಾಡುವವರು/ಜವಾನ/ ಕಾವಲುಗಾರ /ಕಸಗುಡಿಸುವವರು/ಕಛೇರಿ ಸಹಾಯಕ ಮತ್ತು ಮೇಲ್ಕಂಡ ಕೆಲಸಗಳಿಗೆ ಹೋಲುವ ರೀತಿಯ ಇನ್ನಾವುದೇ ರೀತಿಯ ಕೆಲಸ ಮಾಡುವವರು	ಮೂಲ ವೇತನ ತುಟ್ಟಿ ಭತ್ಯೆ ಒಟ್ಟು	3874–00 1357–20 5231–20	3847–00 1357–20 5204–20	3757–00 1357–20 5114–20
16	ಮೇಲ್ಕಂಡ ವರ್ಗಗಳ ಹೊರತುಪಡಿಸಿ ಇನ್ನಾವುದೇ ರೀತಿಯ ಪರಿಶ್ರಮವಿಲ್ಲದ ಕೆಲಸ ಮಾಡುವವರು				

ವಲಯ–1: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಆಗ್ಲೋಮರೇಷನ್ ಪ್ರದೇಶ ಹಾಗೂ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು.

ವಲಯ–2 ರಾಜ್ಯದ ಜಿಲ್ಲಾ ಕೇಂದ್ರಗಳು.

ವಲಯ–3 ವಲಯ 1 ಮತ್ತು 2 ರಲ್ಲಿ ನಮೂದಿಸದೇ ಇರುವ ರಾಜ್ಯದ ಇತರೇ ಪ್ರದೇಶಗಳು

ಶ್ರೀ ಕೆ.ಗೋಪಾಲಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಕಾರ್ಮಿಕ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಬೆಂಗಳೂರು ನಗರದಲ್ಲಿ ಹೋಟೆಲ್‌ಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಇಲ್ಲಿ ಕೊಟ್ಟಿರುವ ಉತ್ತರದಲ್ಲಿ 5,100 ರೂಪಾಯಿ, 5,200 ರೂಪಾಯಿಗಳ ಕನಿಷ್ಠ ವೇತನವನ್ನು ಕೊಡುತ್ತಿರುವುದನ್ನು ನೋಡುತ್ತಿದ್ದೇವೆ. ಯಾವ ಹೋಟೆಲ್‌ನಲ್ಲಿಯೂ ಈ ರೀತಿ ಕೊಡುತ್ತಿಲ್ಲ. ಅಲ್ಲಿ 10,12,14 ಹಾಗೂ 16 ವರ್ಷಗಳಾಗಿರತಕ್ಕ ಬಾಲಕಾರ್ಮಿಕರು ಗ್ರಾಮೀಣ ಪ್ರದೇಶದಿಂದ, ಊರನ್ನು, ತಂದೆ ತಾಯಿಯನ್ನು ಬಿಟ್ಟು ಬಂದು ಕೆಲಸ ಮಾಡುತ್ತಿರುವ ಸಾವಿರಾರು ಪ್ರಕರಣಗಳನ್ನು ಬೆಂಗಳೂರಿನಲ್ಲಿ ಕಂಡಿದ್ದೇವೆ. ತಾವೂ ಸಹ ಹೋಟೆಲ್‌ಗಳಿಗೆ ಹೋದ ಸಂದರ್ಭದಲ್ಲಿ ಗಮನಿಸಿದ್ದೀರಿ. ದಯಮಾಡಿ ಕನಿಷ್ಠ ವೇತನ 4,160 ರೂಪಾಯಿ ಹಾಗೂ ತುಟ್ಟಿಭತ್ಯೆ 1,357 ರೂಪಾಯಿ ಒಟ್ಟು 5,517 ರೂಪಾಯಿಗಳಲ್ಲಿ ಬೆಂಗಳೂರಿನಲ್ಲಿ ಅವರು ಹಾಗೂ ಅವರ ಕುಟುಂಬ, ಮಕ್ಕಳನ್ನು ಓದಿಸಿ, ಜೀವನ ಮಾಡುವುದಕ್ಕೆ ಕಷ್ಟವಾಗುತ್ತದೆ.

ಅಧ್ಯಕ್ಷರು: ನಿಮ್ಮ ಪ್ರಶ್ನೆ ಏನು ಎನ್ನುವುದನ್ನು ಸ್ಪಷ್ಟವಾಗಿ ಕೇಳಿ, ಚರ್ಚೆ ಮಾಡಬೇಡಿ, ಏನು ಮಾಡಬೇಕೆನ್ನುವುದನ್ನು ಕೇಳಿ.

ಶ್ರೀ ಕೆ.ಗೋಪಾಲಯ್ಯ: ಆದ್ದರಿಂದ ಮೂಲ ವೇತನ ಹಾಗೂ ತುಟ್ಟಿಭತ್ಯೆಯನ್ನು ಹೆಚ್ಚು ಮಾಡಿ, ಕಾರ್ಮಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿಕೊಡಬೇಕೆಂದು ಮಾನ್ಯ ಕಾರ್ಮಿಕ ಸಚಿವರನ್ನು ಕೇಳುತ್ತಿದ್ದೇನೆ

ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ: ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರು ಏನು ಪ್ರಶ್ನೆಯನ್ನು ಕೇಳಿದ್ದಾರೆ ಆ ಬಗ್ಗೆ ಬೆಂಗಳೂರು ನಗರದಲ್ಲಿ ರುವ ಹೋಟೆಲ್‌ಗಳಲ್ಲಿ 1,86,725 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ ಎನ್ನುವ ಮಾಹಿತಿಯನ್ನು ನೀಡಿದ್ದೇವೆ. ಎರಡನೆಯ ಪ್ರಶ್ನೆ ಎಷ್ಟು ಹೋಟೆಲ್ ಕಾರ್ಮಿಕರಿಗೆ ಕಾರ್ಮಿಕ ಕಾನೂನಿನ್ವಯ ಪ್ರಾವಿಡೆಂಟ್ ಫಂಡ್, ಇ.ಎಸ್ ಐ ಹಾಗೂ ಇತರ ಸೌಲಭ್ಯಗಳನ್ನು ನೀಡಲಾಗುತ್ತಿದೆ ಎಂದು ಕೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ಇ.ಎಸ್.ಐ. ಮತ್ತು ಪ್ರಾವಿಡೆಂಟ್ ಫಂಡ್ ಈ ಎರಡೂ ಯೋಜನೆ ಗಳು ಕೇಂದ್ರ ಸರ್ಕಾರದಿಂದ ಅನುಷ್ಠಾನವಾಗುವ ಕಾರ್ಯಕ್ರಮಗಳು ಆದರೂ ಸಹ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದು, ಅವರು ನೀಡಿರುವ ಮಾಹಿತಿಗೆ ಅನುಗುಣವಾಗಿ ಈಗಾಗಲೇ ಹೋಟೆಲ್‌ನಲ್ಲಿ ಕರ್ತವ್ಯ ನಿರ್ವಹಿಸು ತ್ತಿರುವ 96,689 ಕಾರ್ಮಿಕರಿಗೆ ಪ್ರಾವಿಡೆಂಟ್ ಫಂಡ್ ಸೌಲಭ್ಯವನ್ನು ನೀಡ ಲಾಗುತ್ತಿದೆ. 42,500 ಕಾರ್ಮಿಕರಿಗೆ ಇ.ಎಸ್.ಐ ಸೌಲಭ್ಯವನ್ನು ನೀಡಲಾಗುತ್ತಿದೆ. ಹಾಗಾಗಿ, ಮಾನ್ಯ ಸದಸ್ಯರು ಕನಿಷ್ಠ ವೇತನ ನೀಡುವ ವಿಚಾರದಲ್ಲಿ ತಾರತಮ್ಯ ವಾಗುತ್ತಿದೆ, ಅನ್ಯಾಯವಾಗುತ್ತಿದೆ, ಅವರಿಗೆ ಸರಿಯಾದ ವೇತನ ಸಿಗುತ್ತಿಲ್ಲ ವೆಂದು ಕೂಡ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಇದು ಕೇಂದ್ರ ಸರ್ಕಾರ ದಿಂದ ಅನುಷ್ಠಾನವಾಗುವ ಯೋಜನೆ ಎಂದು ತಮ್ಮ ಮೂಲಕ ಸದಸ್ಯರ ಗಮನಕ್ಕೆ ತರುವ ಪ್ರಯತ್ನ ಮಾಡಿದ್ದೇನೆ. ಇದು ವಲಯ-1. ವಲಯ-2 ಮತ್ತು ವಲಯ-3 ಬೆಂಗಳೂರು ಮತ್ತು ರಾಜ್ಯದ ಇತರೆ ಪ್ರದೇಶಗಳಿಗೆ ಸಂಬಂಧಪಟ್ಟಿರುವುದು.

ಅಧ್ಯಕ್ಷರು: ಅವರು ಕೇಳಿರುವ ಪ್ರಶ್ನೆಗೆ ಉತ್ತರ ಹೇಳಿ.

ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ: ಪರಿಷ್ಕೃತ ವೇತನ ಬಗ್ಗೆ ಕೇಳಿದ್ದಾರೆ, ಅದಕ್ಕೆ ಸಂಬಂಧಪಟ್ಟಂತೆ ಹೇಳುತ್ತಿದ್ದೇನೆ. ಈ ವಲಯ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಅದಕ್ಕೆ ಹೊಂದಿಕೊಂಡಿರುವ ಪ್ರದೇಶ ಅದು ವಲಯ-1 ರ ವ್ಯಾಪ್ತಿಯಲ್ಲಿ ಬರುವುದರಿಂದ ಈಗಾಗಲೇ ವೇತನ ಬಗ್ಗೆ ಬಹಳ ಸ್ಪಷ್ಟವಾದ ಮಾಹಿತಿಯನ್ನು ಸದಸ್ಯರಿಗೆ ಬರವಣಿಗೆ ಮೂಲಕ ಕೊಡುವ ಕೆಲಸ ಮಾಡಿದ್ದೇವೆ. ಹಾಗಾಗಿ ಎಲ್ಲಾ category-wise 1 ರಿಂದ 16 ಯಲ್ಲಿ ಬರುವ

ಹೋಟೆಲ್ ನಲ್ಲಿ ಕೆಲಸ ಮಾಡುವ ಎಲ್ಲಾ ಕಾರ್ಮಿಕರಿಗೆ ವೇತನ ಶ್ರೇಣಿಯನ್ನು ವಲಯವಾರು ಅವರಿಗೆ ಮುಟ್ಟುವ ಕೆಲಸ ಮಾಡಿದ್ದೇವೆ.

ಶ್ರೀ ಕೆ. ಗೋಪಾಲಯ್ಯ: ಪ್ರಾವಿಡೆಂಟ್ ಫಂಡ್ 98,689 ಜನಕ್ಕೆ ಕೊಟ್ಟ ನಂತರ ಇ.ಎಸ್.ಐ ಯನ್ನು 42,500 ಜನಕ್ಕೆ ಮಾತ್ರ ಕೊಡುತ್ತಿದ್ದು, ಉಳಿದ ವರಿಗೆ ಏನಾಗುತ್ತದೆಂಬುದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಇನ್ನು ಉಳಿದವರ ದುಡ್ಡನ್ನು ಹೋಟೆಲ್‌ನವರೆ ತಿನ್ನುತ್ತಿದ್ದಾರೋ, ಅದರಲ್ಲಿ ಯಾರು ಶಾಮೀಲಾಗಿದ್ದಾರೆ? ಇದರಿಂದ ಬಹಳಷ್ಟು ಕುಟುಂಬಕ್ಕೆ ಅನ್ಯಾಯವಾಗುತ್ತಿದೆ.

ಅಧ್ಯಕ್ಷರು: ನೀವು ನೇರವಾಗಿ ಪ್ರಶ್ನೆ ಹಾಕಿರಿ

ಶ್ರೀ ಕೆ ಗೋಪಾಲಯ್ಯ : ನಾನು ಪ್ರಶ್ನೆ ಹಾಕಿದ್ದೇನೆ ಮಾನ್ಯ ಅಧ್ಯಕ್ಷರೆ, ನೋಡಿ ಪ್ರಾವಿಡೆಂಟ್ ಫಂಡನ್ನು 98,689 ಜನಕ್ಕೆ ಕಟ್ಟುತ್ತಿದ್ದಾರೆ. ಇ.ಎಸ್.ಐ ಯನ್ನು ಮಾತ್ರ 42,500 ಜನಕ್ಕೆ ಕಟ್ಟುತ್ತಿದ್ದಾರೆ. ಉಳಿದವರು ಎಲ್ಲಿ ಹೋಗಿ ದ್ದಾರೆ?

ಅಧ್ಯಕ್ಷರು : ಯಾರ್ಯಾರಿಗೆ ಏನೇನು ಬರುತ್ತದೆ ಎಂದು ಹೇಳಿದ್ದಾರಲ್ಲ.

ಶ್ರೀ ಕೆ. ಗೋಪಾಲಯ್ಯ : ಉಳಿದವರು ಏನಾಗಿದ್ದಾರೆ? 98,689 ಜನಕ್ಕೆ ಪಿ ಎಫ್ ಕಟ್ಟಿದರೆ ಅಷ್ಟೇ ಜನಕ್ಕೆ ಇ.ಎಸ್.ಐ ಯನ್ನೂ ಸಹ ಕಟ್ಟಬೇಕಾಗುತ್ತದೆ.

ಅಧ್ಯಕ್ಷರು : ನೀವು ಏನು ಕೇಳುತ್ತಿದ್ದೀರಿ ಎಂಬುದು ನನಗೆ ಅರ್ಥ ವಾಗುತ್ತಿಲ್ಲ.

ಶ್ರೀ ಕೆ.ಗೋಪಾಲಯ್ಯ : ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರ 98,689 ಜನಕ್ಕೆ ಪಿ.ಎಫ್ ಕಟ್ಟುತ್ತಿದ್ದೇವೆ, 42,500 ಜನಕ್ಕೆ ಇ.ಎಸ್.ಐ ಕಟ್ಟುತ್ತಿ ದ್ದೇವೆ ಎಂದು ಪಿ ಎಫ್ ಎಷ್ಟು ಜನಕ್ಕೆ ಕಟ್ಟುತ್ತಿದ್ದಾರೆ, ಅಷ್ಟೇ ಜನಕ್ಕೆ ಇ.ಎಸ್.ಐ ಯನ್ನು ಬರಬೇಕೆಂದು ಕೇಳುತ್ತದ್ದೇನೆ.

ಅಧ್ಯಕ್ಷರು : ಸಚಿವರು ಉತ್ತರ ಹೇಳಿ.

ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ (ಕಾರ್ಮಿಕ ಸಚಿವರು) : ಕಾರ್ಮಿಕರ ಸಂಖ್ಯೆಗನುಗುಣವಾಗಿ ಇ.ಎಸ್.ಐ. ಮತ್ತು ಪಿ.ಎಫ್ ಕಾಯಿದೆಗಳು ಅನ್ವಯ ವಾಗುತ್ತವೆ. ಇ.ಎಸ್.ಐ. ಮತ್ತು ಪಿ.ಎಫ್. ಕಾಯಿದೆಗಳನ್ನು ಕೇಂದ್ರ ಸರ್ಕಾರ ಜಾರಿಗೆ ತರುತ್ತದೆ ಎಂದು ಮೊದಲೇ ಸ್ಪಷ್ಟವಾಗಿ ಹೇಳಿದ್ದೇನೆ. 20ರಿಂದ ಹೆಚ್ಚು ಕಾರ್ಮಿಕರು ಒಂದು ಯೂನಿಟ್ ಅಥವಾ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರೆ ಅವರಿಗೆ ಇ.ಎಸ್.ಐ ಕೊಡುವುದು ಮತ್ತು 10 ರಿಂದ ಮೇಲ್ಪಟ್ಟು ಹೆಚ್ಚು ಕಾರ್ಮಿಕರು ಇದ್ದಲ್ಲಿ ಅವರಿಗೆ ಇ.ಎಸ್.ಐ.ಆಗೂ ಆಗುತ್ತದೆ. ಹಾಗಾಗಿ ಇರುವ ವ್ಯವಸ್ಥೆಯಲ್ಲಿ ಕಾರ್ಮಿಕರಿಗೆ ಪಿ.ಎಫ್. ಮತ್ತು ಇ.ಎಸ್.ಐ. ಸೌಲಭ್ಯ ಕೊಡಲು ಕಾನೂನಿನಲ್ಲಿ ಏನೆಲ್ಲಾ ಅವಕಾಶ ಇದೆ, ಅದನ್ನು ಮಾಡಲಾಗಿದೆ

ಶ್ರೀ ಕೆ.ಗೋಪಾಲಯ್ಯ: ಮಾನ್ಯ ಅಧ್ಯಕ್ಷರೆ, ಎಲ್ಲೋ ಒಂದು ಕಡೆ ಹೋಟೆಲ್ ನಲ್ಲಿ ಕೆಲಸ ಮಾಡುವ ಬಡ ಕೂಲಿ ಕಾರ್ಮಿಕರಿಗೆ ಅನ್ಯಾಯ ವಾಗುತ್ತಿದ್ದು, ಇದನ್ನು ಸರಿಪಡಿಸುವ ಕೆಲಸ ಸರ್ಕಾರದ ವತಿಯಿಂದ ಆಗಬೇಕು. ಇಲ್ಲದಿದ್ದರೆ ಬಹಳ ಅನ್ಯಾಯವಾಗುತ್ತಿದೆ.

ಅಧ್ಯಕ್ಷರು : ಇದನ್ನು ಪರಿಶೀಲನೆ ಮಾಡಿ.

ಶ್ರೀ ಕೆ.ಗೋಪಾಲಯ್ಯ : ಬಹಳಷ್ಟು ಹೋಟೆಲ್‌ಗಳಲ್ಲಿ ಬಾಲ ಕಾರ್ಮಿ ಕರು ಕೆಲಸ ಮಾಡುತ್ತಿದ್ದಾರೆ. ಅವರ ಸ್ಥಿತಿಗತಿ ಏನು?

ಅಧ್ಯಕ್ಷರು: ಅದೆಲ್ಲಾ ಈಗ ಬೇಡ. ವೇತನದಲ್ಲಿ ತಾರತಮ್ಯ ಎಂಬುದು ನಿಮ್ಮ ಪ್ರಶ್ನೆ ಅಲ್ಲವೇನು? ಇದನ್ನು ಪರಿಶೀಲನೆ ಮಾಡಿ ನೋಡಿ.

ಶ್ರೀ ಕೆ.ಗೋಪಾಲಯ್ಯ . ವೇತನದಲ್ಲಿ ತಾರತಮ್ಯ, ಪಿ.ಎಫ್. ನಲ್ಲಿ ತಾರತಮ್ಯ ಆಗಿದೆ.

ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ (ಕಾರ್ಮಿಕರ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸಲಹೆಯನ್ನು ನಾನು ಖಂಡಿತವಾಗಿಯೂ ಪರಿಶೀಲನೆ ಮಾಡುತ್ತೇನೆ.

(ಗೊಂದಲ)

ಶ್ರೀ ವೈ ಎಸ್ ವಿ.ದತ್ತಾ : ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ಆರಂಭವಾಗಿದೆ. ಆದರೆ ಇಂದು House orderನಲ್ಲಿದೆಯೋ ಇಲ್ಲವೋ ಗೊತ್ತಿಲ್ಲ. ಹಾಗಾಗಿ ಅವರೂ ಕೂಡಾ ಗೌರವಾನ್ವಿತ ಸದಸ್ಯರುಗಳು. ಅವರು ಬಾವಿಯಲ್ಲಿ ಕುಳಿತಿರುವಾಗ ತಾವು ಕಲಾಪ ನಡೆಸಿಕೊಂಡು ಹೋದರೆ ಮುಜುಗರವಾಗುತ್ತದೆ. ಆದುದರಿಂದ ಸಾಧ್ಯವಾದಷ್ಟು ಅದನ್ನು ಬಗೆಹರಿಸುವುದು ಒಳ್ಳೆಯದು ಎಂಬುದು ನನ್ನ ಅಭಿಪ್ರಾಯ.

ಅಧ್ಯಕ್ಷರು : ವಿಷಯವೇ ಇಲ್ಲದೇ ಬಗೆಹರಿಸುವುದು ಹೇಗೆ?

ಶ್ರೀ ವೈ.ಎಸ್.ವಿ.ದತ್ತಾ : ಅಲ್ಲ ಸರ್ಕಾರದ ಕಡೆಯಿಂದ ಪ್ರಯತ್ನ ಆಗಬೇಕು

ಅಧ್ಯಕ್ಷರು : ಆಯಿತು ಬಿಡಿ. Next ಬರುತ್ತದೆ.

ಶ್ರೀ ವೈ.ಎಸ್.ವಿ ದತ್ತಾ : ಅಲ್ಲ ನಿಮಗೂ ಒಂದು ರೀತಿಯ ಮುಜುಗರ.

ಅಧ್ಯಕ್ಷರು : ಈಗ ಸುನೀಲ್ ಕುಮಾರ್.

ಶ್ರೀ ವಿ ಸುನೀಲ್ ಕುಮಾರ್ : ಮಾನ್ಯ ಅಧ್ಯಕ್ಷರೆ ಪ್ರಶ್ನೆ ಸಂಖ್ಯೆ 129 ಅನ್ನು ಮಾನ್ಯ ಮುಜರಾಯಿ ಸಚಿವರಿಗೆ ಕೇಳುತ್ತಿದ್ದೇನೆ. ಮುಜರಾಯಿ ಸಚಿವರು ಇಲ್ಲ, ಮಾನ್ಯ ಅಧ್ಯಕ್ಷರೆ. ಅವರು ಬೆಳಗಾವಿಯವರು.

ಅಧ್ಯಕ್ಷರು : ಅವರನ್ನು ಕರೆಸುತ್ತೇನೆ.

ಶ್ರೀ ವಿ.ಸುನೀಲ್ ಕುಮಾರ್ . ಹೀಗಾದರೆ ಮುಜುಗರಕ್ಕೆ ಒಳಗಾಗುತ್ತೇನೆ ನಾನು.

ಶ್ರೀ ಸಿ.ಟಿ.ರವಿ : ದೇವರ ಸಚಿವರನ್ನು ಕರೆದುಕೊಂಡು ಬರುವುದಕ್ಕೆ ದೇವರ ಮೊರೆ ಹೋಗಬೇಕು.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯಲ್ಲಿ ಸಚಿವರುಗಳು ಇರಲೇ ಬೇಕು ಅವರನ್ನು ಬರಲು ಹೇಳುತ್ತೇನೆ. ಮಾನ್ಯ ಕಾರಜೋಳ ಅವರು, ಇಲ್ಲ. ತನ್ವೀರ್ ಸೇರ್.

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ ಮಾನ್ಯ ಜವಳಿ ಸಚಿವರು ಸದನದಲ್ಲಿ ಇಲ್ಲ.

ಅಧ್ಯಕ್ಷರು : ಈಗ ಬಿ.ಆರ್.ಪಾಟೀಲ್ ರವರು

Scarcity of water due to non-Existence of tanks.

ಶ್ರೀ ಪಾಟೀಲ್ ಬಿ.ಆರ್ : ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಅಳಂದ ತಾಲ್ಲೂಕಿನಲ್ಲಿ ಇಲ್ಲದೇ ರೈತರು, ಸಾರ್ವಜನಿಕರು ಮತ್ತು ದನಕರುಗಳು ನೀರಿನ ಕೊರತೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅಳಂದ ಕ್ಷೇತ್ರದಲ್ಲಿ ಸರ್ಕಾರ ಎಷ್ಟು ಕಡೆ ಸಣ್ಣ ನೀರಾವರಿಯ ಕೆರೆಗಳು ಮತ್ತು ಒಸರು ಕೆರೆಗಳನ್ನು ನಿರ್ಮಾಣ ಮಾಡಲಿದೆ;

ಇ) ಈ ವರ್ಷ ಸಣ್ಣ ನೀರಾವರಿಗಾಗಿ ಸರ್ಕಾರ ಅಳಂದ ಕ್ಷೇತ್ರಕ್ಕೆ ಎಷ್ಟು ಹಣವನ್ನು ಮೀಸಲಿಟ್ಟು ಬಿಡುಗಡೆ ಮಾಡಿದೆ;

ಈ) ಹಾಗಿಲ್ಲದಿದ್ದಲ್ಲಿ, ಹಣ ಒದಗಿಸದೇ ಇರುವುದಕ್ಕೆ ಕಾರಣಗಳೇನು?

ಶ್ರೀ ಶಿವರಾಜ ಎಸ್. ಸಂಗಡಗಿ (ಸಣ್ಣ ನೀರಾವರಿ ಸಚಿವರು)

ಅ) ಅಳಂದ ತಾಲ್ಲೂಕಿನಲ್ಲಿ 17 ಕೆರೆಗಳು, 14 ಜಿನಗು ಕೆರೆಗಳು, 7 ಅಣೆಕಟ್ಟು ಪಿಕಪ್ ಬಂದಾರ ಅಸ್ತಿತ್ವ–ದಲ್ಲಿರುತ್ತವೆ ನೀರು ಶೇಖರಣೆ ಯಾದಲ್ಲಿ ಇವುಗಳಿಂದ 4362 ಹೆಕ್ಟೇರ್ ಪ್ರದೇಶವನ್ನು ನೀರಾವರಿಗೆ ಒಳಪಡಿಸ ಬಹುದಾಗಿದೆ ವಿವರಗಳನ್ನು.